## ಗುರುತತ್ತ್ವ

# ಮರಳುಗಾಡಿನಲ್ಲಿ ಅರಳಿದ ಅರಿವು

ಥಾಮಸ್ ಮರ್ಟನ್

(ಕ್ರಿ.ಶ. ನಾಲ್ಕನೆಯ ಶತಮಾನದಲ್ಲಿ ಈಜಿಪ್ಟ್, ಪ್ಯಾಲೆಸ್ಟೈನ್ ಮತ್ತು ಅರೇಬಿಯಾ ದೇಶಗಳ ಮರುಭೂಮಿಗಳಲ್ಲಿ ಕ್ರೈಸ್ತ ತಪಸ್ವಿಗಳು ವಾಸಿಸುತ್ತಿದ್ದರು. ಗುಹೆಗಳಲ್ಲಿ ವಾಸಿಸುತ್ತ, ಅತ್ಯಂತ ಕಠಿಣ ತಪಸ್ಸನ್ನು ನಡೆಸುತ್ತಿದ್ದ ಅವರ ಜೀವನ ಭಗವನ್ಮಯವಾಗಿತ್ತು. ಸಂನ್ಯಾಸಧರ್ಮದ ಮೂರು ಮೂಲಭೂತ ವ್ರತಗಳಾದ **ಬ್ರಹ್ಮಚರ್ಯ, ಬಡತನ ಮತ್ತು ವಿಧೇಯತೆಗಳ** ಪ್ರತಿರೂಪರಾಗಿದ್ದರು ಅವರು. ಅವರ ಕೆಲವು ಸ್ವಾರಸ್ಯಕರವೂ ನೀತಿಪ್ರದವೂ ಆದ ಬೋಧನೆಗಳನ್ನು ಥಾಮಸ್ ಮರ್ಟನ್ ಎನ್ನುವ ಪಾದ್ರಿ ಸಂಗ್ರಹಿಸಿ 'The Wisdom of the Desert' ಎಂಬ ಶೀರ್ಷಿಕೆಯಲ್ಲಿ ಪ್ರಕಟಿಸಿದ್ದಾರೆ. ಅವುಗಳಿಂದ ಆರಿಸಿದ ಕೆಲವು ಅನರ್ಘ್ಯ ರತ್ನಗಳನ್ನು ಓದುಗರ ಮುಂದೆ ಪ್ರಸ್ತುತ ಪಡಿಸುತ್ತಿದ್ದೇವೆ.)

೧. ಒಬ್ಬ ಯುವ ಸಂನ್ಯಾಸಿ, ಹಿರಿಯ ಸಂನ್ಯಾಸಿಯಾದ ಥಿಯೊಡೋರ್ ಎಂಬುವವರ ಬಳಿಗೆ ಬಂದನು; ತಾನು ಅನುಷ್ಠಾನಕ್ಕೆ ತರದೆ ಇದ್ದ ಆಧ್ಯಾತ್ಮಿಕ ವಿಷಯಗಳನ್ನೆಲ್ಲ ಹೇಳಲು ಆರಂಭಿಸಿದನು. ಆಗ ಆ ಹಿರಿಯ ಸಂನ್ಯಾಸಿ ಅವನಿಗೆ ಹೀಗೆ ಹೇಳಿದರು: "ನೋಡು, ನೀನು ಪ್ರಯಾಣ ಮಾಡಬೇಕಾಗಿದೆ ಎಂದುಕೋ. ನೀನು ಪ್ರಯಾಣ ಮಾಡಬೇಕಾದ ಹಡಗನ್ನೇ ನೀನು ಕಂಡುಕೊಂಡಿಲ್ಲ; ನಿನ್ನ ಸಾಮಾನನ್ನು ಅದರೊಳಗೆ ನೀನು ಇನ್ನೂ ಇಟ್ಟುಕೊಂಡಿಲ್ಲ; ಹಡಗು ಸಮುದ್ರದಲ್ಲಿ ಸಂಚರಿಸುತ್ತಲೇ ಇಲ್ಲ. ಹೀಗಿರುವಾಗ, ನೀನು ಹೋಗಿಸೇರಲು ಯೋಜಿಸಿಕೊಂಡಿರುವ ಪಟ್ಟಣದ ಬಗ್ಗೆ ಈಗಲೇ ದೊಡ್ಡದಾಗಿ ಮಾತನಾಡುತ್ತಿದ್ದರೆ ಅದು ಸರಿಯೇ? ಅದನ್ನೇ ನೀನೀಗ ಮಾಡುತ್ತಿರುವುದು. ನೀನೀಗ ಮಾತನಾಡುತ್ತಿರುವ ಆಧ್ಯಾತ್ಮಿಕ ಸಂಗತಿಗಳನ್ನು ನೀನು ಅನುಷ್ಠಾನಕ್ಕೆ ತಂದುಕೊಂಡದ್ದೇ ಆದರೆ, ಮಾತಿಗಿಂತಲೂ ಹೆಚ್ಚಾಗಿ ಅದೇ ಅವುಗಳ ಬಗ್ಗೆ ಇತರರಿಗೆ ತಿಳಿಸಿಕೊಡುತ್ತದೆ!"

೨. ಒಮ್ಮೆ ಒಂದು ಪ್ರಾಂತ್ಯದ ಮುಖ್ಯ ನ್ಯಾಯಾಧೀಶನು ಫಾದರ್ ಮೋಸೆಸ್ ಅವರನ್ನು ಸಂದರ್ಶಿಸಲು ಹೊರಟನು. ದಾರಿಯಲ್ಲಿ ಅವನು ಒಬ್ಬ ಮುದುಕನನ್ನು ಕಂಡನು. ನ್ಯಾಯಾಧೀಶನು ಅವನನ್ನು ಕೇಳಿದನು: " ಯಜಮಾನರೇ, ನಾನು ಮೋಸೆಸ್ ಎಂಬ ಮಹಾತ್ಮರನ್ನು ಕಾಣಲು ಹೋಗುತ್ತಿದ್ದೇನೆ. ಅವರ ಕುಟೀರ ಎಲ್ಲಿದೆ, ಹೇಳುವಿರಾ?" ಅದಕ್ಕೆ ಮುದುಕ, " ಏನು, ನೀನು ಅವನನ್ನು ನೋಡಲು ಹೋಗುತ್ತಿರುವೆಯೇನು? ಅವನೊಬ್ಬ ಮೂರ್ಖ ಮತ್ತು ಪಾಷಂಡಿ." ನ್ಯಾಯಾಧೀಶನು ಮುದುಕನ ಮಾತನ್ನು ಲೆಕ್ಕಿಸದೆ, ಮುಂದಕ್ಕೆ ಪ್ರಯಾಣ ಮಾಡಿದನು, ಅಲ್ಲಿನ ದೇವಾಲಯವನ್ನು ತಲುಪಿದನು. ಅಲ್ಲಿ ನೆರೆದಿದ್ದ ಸಾಧುಗಳಿಗೆ ಸಂತರಾದ ಮೋಸೆಸ್ ಅವರನ್ನು ಕಾಣುವ ಇಚ್ಛೆಯನ್ನು ವ್ಯಕ್ತಪಡಿಸಿದನು. ಅನಂತರ ತಾನು ದಾರಿಯಲ್ಲಿ ಒಬ್ಬ ಮುದುಕನನ್ನು ಕಂಡಿದ್ದನ್ನೂ ಅವನು ಮೋಸೆಸ್ ಬಗ್ಗೆ ಕೆಟ್ಟದಾಗಿ ಮಾತನಾಡಿದ್ದನ್ನೂ ತಿಳಿಸಿದನು. ಅದಕ್ಕೆ ಅಲ್ಲಿ ನೆರೆದಿದ್ದ ಸಾಧುಗಳು ಆ ಮುದುಕ ಹೇಗಿದ್ದನು ಎಂದು ಕೇಳಿದರು. ನ್ಯಾಯಾಧೀಶನು ಆ ಮುದುಕನ ಚಹರೆಗಳನ್ನು ಹೇಳಿದನು. ಅದನ್ನು ಕೇಳಿದ ಸಾಧುಗಳು ಹೇಳಿದರು: "ಅವರೇ ಸಂತ ಮೋಸೆಸ್. ನೀವು ಅವರನ್ನು ನೋಡಲು ಬರುತ್ತೀರೆಂದು ತಿಳಿದು ಕುಟೀರವನ್ನು ಬಿಟ್ಟು ಎಲ್ಲಿಗೋ ಪಲಾಯನ ಮಾಡಿಬಿಟ್ಟಿದ್ದಾರೆ. ನೀವು ದಾರಿಯಲ್ಲಿ ನೋಡಿದ್ದು ಅವರನ್ನೇ." ನ್ಯಾಯಾಧೀಶನು ಸಂತ ಮೋಸೆಸ್ ಅವರ ತೀವ್ರ ವೈರಾಗ್ಯವನ್ನೂ ನಿರಹಂಕಾರವನ್ನೂ ಕಂಡು ಅಚ್ಚರಿಪಟ್ಟನು.

೩. ಸೆರಾಪಿಯನ್ ಎಂಬ ಸಂತನು ತಾನು ಇಟ್ಟುಕೊಂಡಿದ್ದ ಬೈಬಲ್ ಪ್ರತಿಯನ್ನು ಮಾರಿಬಿಟ್ಟನು; ಅದರಿಂದ ಬಂದ ಹಣವನ್ನು ಹಸಿದವರಿಗೆ ಹಂಚಿಬಿಟ್ಟನು. ಅವನು ಹೇಳಿದನು: " ಈ ಪುಸ್ತಕದಲ್ಲಿ ಎಲ್ಲವನ್ನೂ ಮಾರಿ ಆ ಹಣವನ್ನು ಬಡವರಿಗೆ ಕೊಡು ಎಂದು ಬರೆದಿದೆ. ಆದ್ದರಿಂದ ನನ್ನ ಬಳಿ ಇದ್ದ ಒಂದೇ ಆಸ್ತಿಯಾದ ಅದನ್ನೇ ಮಾರಿಬಿಟ್ಟೆನು."

೪. ಒಬ್ಬ ಯುವ ಸಾಧುವು ಇನ್ನೊಬ್ಬನನ್ನು ಹೀಯಾಳಿಸಿದನು. ಅದಕ್ಕೆ ಪ್ರತೀಕಾರ ಮಾಡಲೇಬೇಕೆಂದು ಎಣಿಸಿದ ಆ ಸಾಧುವು ಹಿರಿಯ ಸಂನ್ಯಾಸಿಗಳಾದ ಸಿಯೋಸಿಸ್ ಅವರ ಬಳಿ ಬಂದು ಹೀಗೆ ನುಡಿದನು: "ನನಗೆ ಬಹಳ ಕೋಪ ಬಂದಿತ್ತು, ಫಾದರ್. ಆದರೆ ಇನ್ನೊಬ್ಬ ಹಿರಿಯ ಸಾಧು ಎಲ್ಲವನ್ನೂ ಭಗವಂತನಿಗೆ ಬಿಟ್ಟುಬಿಡು ಎಂದರು. ಇಲ್ಲ, ನಾನು ಹಾಗೆಯೇ ಬಿಟ್ಟುಬಿಡಲಾರೆ. ನನ್ನನ್ನು ಹೀಯಾಳಿಸಿದ್ದಕ್ಕೆ ಅವನು ಬೆಲೆಯನ್ನು ತೆರಲೇಬೇಕು. ಅಲ್ಲಿಯ ತನಕ ನಾನು ಸುಮ್ಮನಿರುವುದಿಲ್ಲ." ಆ ಮಾತನ್ನು ಕೇಳಿಸಿಕೊಂಡ ಫಾದರ್ ಸಿಯೋಸಿಸ್ ಏನೂ ಮಾತನಾಡದೆ ಎದ್ದುನಿಂತರು. ಮೊಣಕಾಲೂರಿ ಭಗವಂತನನ್ನು ಹೀಗೆ ಪ್ರಾರ್ಥಿಸಿದರು: "ಓ ಪ್ರಭುವೇ, ನಿನ್ನ ಆವಶ್ಯಕತೆ ನಮಗೆ ಇನ್ನು ಮುಂದೆ ಇಲ್ಲವೆಂದೇ ತೋರುತ್ತದೆ. ಈಗ ನಮ್ಮನ್ನು ನಾವೇ ರಕ್ಷಿಸಿಕೊಳ್ಳಬಲ್ಲೆವು. ಈ ನನ್ನ ಸಹೋದರ ಹೇಳಿದ್ದನ್ನು ನೀನು ಕೇಳಿಸಿಕೊಳ್ಳಲಿಲ್ಲವೇನು? ನಾವು ಒಬ್ಬರಿಗೊಬ್ಬರು ಪ್ರತೀಕಾರ ಎಸಗಬಲ್ಲೆವು ಮಾತ್ರವಲ್ಲ, ಅದನ್ನೇ ಮಾಡಹೊರಟಿರುವೆವು." ಈ ಪ್ರಾರ್ಥನೆಯನ್ನು ಕೇಳಿಸಿಕೊಂಡ ಆ ಯುವಸಾಧುವಿಗೆ ತನ್ನ ತಪ್ಪಿನ ಮನವರಿಕೆಯಾಯಿತು. ಅವನು ತನ್ನ ಪ್ರತೀಕಾರದ ಭಾವನೆಯನ್ನು ಬಿಡುವೆನೆಂದು ಮಾತುಕೊಟ್ಟನು.

೫. ಹಿರಿಯ ಸಂನ್ಯಾಸಿಗಳಾದ ಜಾನ್ ಈ ಕಥೆ ಹೇಳುತ್ತಿದ್ದರು: ಒಬ್ಬ ಗ್ರೀಕ್ ತತ್ತ್ವಶಾಸ್ತ್ರಜ್ಞನಿಗೆ ಒಬ್ಬ ಶಿಷ್ಯನಿದ್ದನು. ಶಿಷ್ಯನಿಗೆ ಗುರುವು " ಮೂರು ವರ್ಷಗಳ ಕಾಲ ನಿನ್ನನ್ನು ನಿಂದಿಸಿದವರಿಗೆಲ್ಲ ಹಣವನ್ನು ಕೊಡು" ಎಂದು ಆದೇಶವಿತ್ತನು. ಶಿಷ್ಯನು ಅದೇ ರೀತಿ ನಡೆದುಕೊಂಡನು. ಮೂರು ವರ್ಷ ಕಳೆಯಿತು. ನಂತರ ಗುರು ಶಿಷ್ಯನಿಗೆ ಹೇಳಿದನು: "ನೀನೀಗ ಅಥೆನ್ಸ್ ನಗರಕ್ಕೆ ಹೋಗಿ ವಿದ್ಯೆಯನ್ನು ಕಲಿಯಬಹುದು." ಗುರುವಿನ ಮಾತಿನಂತೆ ಶಿಷ್ಯನು ಅಥೆನ್ಸ್ ನಗರಕ್ಕೆ ಹೋದನು. ನಗರ ಪ್ರವೇಶ ಮಾಡುವಾಗ, ಅಲ್ಲೊಬ್ಬ ವಿದ್ವಾಂಸನು ಎಲ್ಲರನ್ನೂ ನಿಂದಿಸುತ್ತ ಕುಳಿತಿರುವುದನ್ನು ಕಂಡು, ಜೋರಾಗಿ ನಗಲಾರಂಭಿಸಿದನು. ಅದನ್ನು ಕಂಡು ಆ ವಿದ್ವಾಂಸನಿಗೆ ಅಚ್ಚರಿಯಾಯಿತು. ಕಾರಣ ಕೇಳಿದಾಗ, ಶಿಷ್ಯ ಹೇಳಿದ, "ನಮ್ಮೂರಿನಲ್ಲಿ, ನಿಂದೆ ಮಾಡುವುದಕ್ಕಾಗಿ ನಾನು ಹಣ ತೆರುತ್ತಿದ್ದೆ. ನೀನೋ ಅದನ್ನು ಪುಕ್ಕಟೆಯಾಗಿ ಕೊಡುತ್ತಿದ್ದೀಯೆ." ಆ ವಿದ್ವಾಂಸನು ಶಿಷ್ಯನಿಗೆ, "ನಗರವನ್ನು ಪ್ರವೇಶಿಸು. ಅದರೊಳಗೆ ಇರುವುದೆಲ್ಲವೂ ನಿನ್ನದೇ" ಎಂದನು. ಫಾದರ್

ಜಾನ್ ಈ ಕಥೆ ಮುಗಿಸಿ ಹೀಗೆ ಹೇಳುತ್ತಿದ್ದರು: ಕಥೆಯಲ್ಲಿನ ಆ ದ್ವಾರ ಯಾವುದು ಗೊತ್ತೆ? ಸ್ವರ್ಗಲೋಕದ ದ್ವಾರ. ನಮ್ಮ ಹಿಂದಿನ ಮಹಾತ್ಮರು ನಿಂದೆ, ಕಷ್ಟಗಳನ್ನೂ ಸಂತೋಷವಾಗಿ ಅನುಭವಿಸಿದರು. ಅಂತಹವರು ಮಾತ್ರವೇ ಪ್ರವೇಶಿಸಬಹುದಾದ ದ್ವಾರವದು."

೬. ಪ್ಯಾಂಬೋ ಎಂಬ ಸಂನ್ಯಾಸಿಯು ಆ್ಯಂಟನಿ ಎಂಬ ಹಿರಿಯ ಸಂನ್ಯಾಸಿಗಳನ್ನು ಕೇಳಿದನು: "ನಾನು ಹೇಗೆ ನಡೆದುಕೊಳ್ಳಬೇಕು? " ಅದಕ್ಕೆ ಅವರು ಉತ್ತರಕೊಟ್ಟರು: "ನೀನು ಬಹಳ ದೊಡ್ಡ ಗುಣಶಾಲಿ ಯೆಂದು ನಂಬಿಕೊಂಡಿರಬೇಡ. ಆಗಿ ಹೋದ ಸಂಗತಿಗೆ ಚಿಂತಿಸಬೇಡ. ನಿನ್ನ ನಾಲಿಗೆ ಮತ್ತು ಹೊಟ್ಟೆಗಳನ್ನು ನಿಯಂತ್ರಣದಲ್ಲಿ ಇಟ್ಟುಕೊಂಡಿರು."

೭. ಒಬ್ಬ ಯುವ ಸಂನ್ಯಾಸಿಯು ಅವನ ಹಿರಿಯರನ್ನು ಕೇಳಿದನು: "ಭಗವಂತನಲ್ಲಿ ಭಕ್ತಿ ಬರುವುದು ಹೇಗೆ?" ಅದಕ್ಕೆ ಆ ಹಿರಿಯರು ಹೇಳಿದರು, "ಒಬ್ಬನು ವಿನಮ್ರನಾಗಿದ್ದರೆ, ಸರಳ ಜೀವನ ನಡೆಸುತ್ತಿದ್ದರೆ, ಇನ್ನೊಬ್ಬರ ತಪ್ಪನ್ನು ಎಣಿಸದೇ ಇದ್ದರೆ – ಆಗ ಭಗವದ್ಭಕ್ತಿಯು ಅವನಲ್ಲಿ ಪ್ರವೇಶಿಸುವುದು."

೮. ಪ್ಯಾಸ್ಟರ್ ಎಂಬ ಹಿರಿಯ ಸಂನ್ಯಾಸಿ ಹೀಗೆ ಹೇಳುತ್ತಿದ್ದರು: "ಒಬ್ಬ ಸಂನ್ಯಾಸಿ ಎರಡು ಸಂಗತಿಗಳನ್ನು ದ್ವೇಷಿಸಿದರೆ, ಅವನು ಈ ಜಗತ್ತಿನಲ್ಲಿ ಸ್ವತಂತ್ರ ಜೀವನ ನಡೆಸಬಹುದು. ಅವೆಂದರೆ, ಸೋಮಾರಿ ತನ ಮತ್ತು ಸ್ವಪ್ರತಿಷ್ಠೆ."

೯. ಅಮ್ಮೋನಸ್ ಎಂಬ ಹಿರಿಯ ಸಾಧು ಹೇಳುತ್ತಿದ್ದರಂತೆ: "ನಾನು ಹದಿನಾಲ್ಕು ವರ್ಷಗಳ ಕಾಲ ದಿನಾರಾತ್ರಿ ಭಗವಂತನನ್ನು ಒಂದೇ ವರಕ್ಕಾಗಿ ಪ್ರಾರ್ಥಿಸುತ್ತಿದ್ದೆ. ಅದೇನೆಂದರೆ, 'ನನಗೆ ಕೋಪ ಬರದಂತೆ ಮಾಡು' ಎಂದು."

೧೦. ಒಬ್ಬ ಹಿರಿಯ ಸಾಧು ಹೀಗೆ ಹೇಳುತ್ತಿದ್ದರು: " ನಾವು ಆಧ್ಯಾತ್ಮಿಕ ಮಾರ್ಗದಲ್ಲಿ ಮುಂದುವರಿಯದಿರುವುದಕ್ಕೆ ಕಾರಣ, ನಮ್ಮ ಸೀಮಿತತೆಗಳನ್ನು ನಾವು ತಿಳಿದುಕೊಳ್ಳದೆ ಇರುವುದು ಮತ್ತು ನಾವು ಆರಂಭಿಸಿದ ಸಾಧನೆಯನ್ನು ಮುಂದುವರಿಸಿಕೊಂಡು ಹೋಗುವ ತಾಳ್ಮೆ ನಮಗಿಲ್ಲದಿರುವುದು. ಆದರೆ ಪರಿಶ್ರಮವಿಲ್ಲದೆಯೇ, ನಾವು ಆಧ್ಯಾತ್ಮಿಕ ಗುಣಸಂಪನ್ನರಾಗಲು ಇಚ್ಛಿಸುತ್ತೇವೆ. ಅದೇ ನಾವು ಮಾಡುವ ಬಹಳ ದೊಡ್ಡ ತಪ್ಪು."

೧೧. ಪ್ಯಾಸ್ಟರ್ ಎಂಬ ಹಿರಿಯ ಸಾಧು ಹೀಗೆ ಹೇಳುತ್ತಿದ್ದರು: "ನಿನ್ನ ಹತ್ತಿರ ಪೆಟ್ಟಿಗೆ ತುಂಬ ಬಟ್ಟೆಗಳಿವೆ ಎಂದಿಟ್ಟುಕೋ. ಅದನ್ನು ನೀನು ಬಹುಕಾಲ ಹಾಗೆಯೇ ಬಿಟ್ಟರೆ, ಬಟ್ಟೆ ನಾರುವುದಕ್ಕೆ ಆರಂಭ ವಾಗುತ್ತದೆ. ಅದೇ ರೀತಿ, ನಿನ್ನ ಮನಸ್ಸಿನಲ್ಲಿರುವ ಆಲೋಚನೆಗಳೂ ಕೂಡ. ಅವನ್ನು ನೀನು ನಿನ್ನ ಶಾರೀರಿಕ ಶ್ರಮದಿಂದ, ಅನುಷ್ಠಾನ ಗೊಳಿಸದಿದ್ದರೆ, ಬಹಳ ಕಾಲದ ನಂತರ ಅವೆಲ್ಲ ಕೊಳೆತು, ನಿನಗೆ ಕೆಡುಕಾಗುತ್ತದೆ."

೧೨. ಅವರೇ ಮತ್ತೂ ಹೇಳುತ್ತಿದ್ದರು: "ದ್ವೇಷವು ದ್ವೇಷವನ್ನೆಂದೂ ಹೊಡೆದೋಡಿಸುವುದಿಲ್ಲ. ನಿನ್ನನ್ನು ಯಾರಾದರೂ ದ್ವೇಷಿಸಿದರೆ, ನೀನು ಅವರಿಗೆ ಒಳ್ಳೆಯದನ್ನೇ ಮಾಡಬೇಕು. ನಿನ್ನ ಒಳ್ಳೆಯ ಕಾರ್ಯವು ಅವರ ದ್ವೇಷವನ್ನು ನಾಶಪಡಿಸುತ್ತದೆ." ಮುಂದುವರಿದು ಅವರು ಹೇಳಿದರು: " ಜಗಳಗಂಟನು ಸಂನ್ಯಾಸಿಯೇ ಅಲ್ಲ; ಕೆಡುಕಿಗೆ ಪ್ರತಿ ಯಾಗಿ ಕೆಡುಕು ಮಾಡುವವನು ಸಂನ್ಯಾಸಿಯೇ ಅಲ್ಲ; ಯಾವನು ಕೋಪಗೊಳ್ಳುವನೋ ಅವನು ಸಂನ್ಯಾಸಿಯೇ ಅಲ್ಲ."

೧೩. ಒಬ್ಬ ಯುವ ಸಾಧು ಫಾದರ್ ಪ್ಯಾಸ್ಟರ್ ಅವರ ಬಳಿಗೆ ಬಂದು ತನ್ನ ತೊಂದರೆಯನ್ನು ಹೇಳಿಕೊಂಡನು: "ನನ್ನ ಮನಸ್ಸಿನೊಳಗೆ ಅನೇಕ ಪ್ರಕ್ಷುಬ್ಧ ಆಲೋಚನೆಗಳು ಬಂದು ನುಸುಳಿಬಿಡುತ್ತವೆ. ನಾನು ಅವುಗಳಿಂದಾಗಿ ಬಹಳ ಅಪಾಯದಲ್ಲಿದ್ದೇನೆ." ಆಗ ಆ ಹಿರಿಯ ಸಾಧು ಕುಟೀರದಿಂದ ಅವನನ್ನು ಹೊರಕ್ಕೆ ಕರೆದುಕೊಂಡು ಹೋಗಿ ಹೇಳಿದರು: "ನಿನ್ನ ಬಟ್ಟೆ ಬಿಚ್ಚಿ, ಬೀಸುತ್ತಿರುವ ಗಾಳಿಯನ್ನು ಅದರಿಂದ ಹಿಡಿದುಕೋ." ಅದಕ್ಕೆ ಆ ಯುವ ಸಾಧು, "ಅದು ನನ್ನಿಂದ ಆಗದ ಕೆಲಸ" ಎಂದನು. ಆಗ ಫಾದರ್ ಪ್ಯಾಸ್ಟರ್ ಹೇಳಿದರು: "ನೀನು ಗಾಳಿಯನ್ನು ಹಿಡಿಯಲಾರೆ, ಅಲ್ಲವೇ. ಅದರಂತೆ ಕೆಟ್ಟ ಆಲೋಚನೆ ಗಳು ನಿನ್ನ ಮನಸ್ಸನ್ನು ಪ್ರವೇಶಿಸದಂತೆಯೂ ನೀನು ತಡೆಯಲಾರೆ. ನೀನು ಮಾಡಬೇಕಾದುದು ಏನು ಗೊತ್ತೆ? ಅವುಗಳಿಗೆ ಅನುಮತಿಯನ್ನು ನಿರಾಕರಿಸುವುದು."

೧೪. ಒಬ್ಬ ಸಂನ್ಯಾಸಿಯು ಇನ್ನೊಬ್ಬ ಸಂನ್ಯಾಸಿಯ ಕುಟೀರಕ್ಕೆ ಬಂದು ಉಳಿದುಕೊಂಡರು. ಹೊರಡುವಾಗ, "ಕ್ಷಮೆಯಿರಲಿ, ಫಾದರ್. ನಿಮ್ಮ ಏಕಾಂತವ್ರತವನ್ನು ನಾನು ಭಂಗಮಾಡಿಬಿಟ್ಟೆ" ಎಂದರು. ಅದಕ್ಕೆ ಆತಿಥ್ಯ ನೀಡಿದ ಸಾಧು ಹೇಳಿದರು: "ನಿನ್ನನ್ನು ಆದರದಿಂದ ಬರಮಾಡಿ ಕೊಳ್ಳುವುದು ಮತ್ತು ಶಾಂತಭಾವದಿಂದ ನೀನು ತೆರಳುವಂತೆ ಮಾಡು ವುದು – ಇದೇ ನನ್ನ ವ್ರತ."

೧೫. ಒಬ್ಬ ಸಂನ್ಯಾಸಿ ಹೀಗೆ ಹೇಳಿದರು : "ಬಗ್ಗಡಗೊಂಡ ನೀರಿನಲ್ಲಿ ಒಬ್ಬ ವ್ಯಕ್ತಿ ತನ್ನ ಮುಖವನ್ನು ನೋಡಿಕೊಳ್ಳಲಾರನಷ್ಟೆ. ಅದೇ ರೀತಿ. ಕೆಟ್ಟ ಆಲೋಚನೆಗಳಿರುವ ಮನಸ್ಸನ್ನು ಶುದ್ಧಿಗೊಳಿಸದಿದ್ದರೆ ಭಗವಂತನನ್ನು ತನ್ಮಯತೆಯಿಂದ ಪ್ರಾರ್ಥಿಸಲಾಗದು."

೧೬. ವಿನಮ್ರತೆ ಎಂದರೆ ಏನು? ಎಂದು ಒಬ್ಬ ಹಿರಿಯ ಸಾಧುಗಳನ್ನು ಯಾರೋ ಪ್ರಶ್ನಿಸಿದರು. ಅದಕ್ಕೆ ಅವರು ಹೀಗೆ ಉತ್ತರ ಕೊಟ್ಟರು: "ನಿನಗೆ ಹಿಂಸೆಕೊಟ್ಟ ಸಹೋದರನನ್ನು ನೀನು ಕ್ಷಮಿಸಬೇಕು, ಅದೂ ಅವನು ಬಂದು ಕ್ಷಮಾಪಣೆ ಕೇಳುವ ಮುನ್ನವೇ. ಇದೇ ವಿನಮ್ರತೆ."

೧೭. ಫಾದರ್ ಪ್ಯಾಸ್ಟರ್ ಹೇಳುತ್ತಿದ್ದರು: ನಿನಗೆ ಬರುವ ಯಾವುದೇ ಕಷ್ಟವನ್ನು ಒಂದರಿಂದ ಗೆಲ್ಲಬಹುದು. ಅದೆಂದರೆ, 'ಮೌನ.'

೧೮. ಒಬ್ಬರು ಫಾದರ್ ಪ್ಯಾಸ್ಟರ್ ಅವರನ್ನು ಹೀಗೆ ಕೇಳಿದರು: "ನಾನು ಒಬ್ಬ ಸಂನ್ಯಾಸಿಯಾಗುವುದು ಹೇಗೆ, ಹೇಳಿ?" ಅದಕ್ಕೆ ಪ್ಯಾಸ್ಟರ್ ಉತ್ತರ ಕೊಟ್ಟರು: " ಈ ಜೀವನದಲ್ಲಿ ಮತ್ತು ಮುಂದಿನ ಲೋಕದಲ್ಲಿ, ವಿಶ್ರಾಂತಿಯಿಂದ ಇರಬೇಕೆಂದು ನೀನು ಬಯಸುವೆಯಾದರೆ, ಬೇರೆ ಯವರ ಜೊತೆಗಿನ ಪ್ರತಿಯೊಂದು ಸಂಘರ್ಷದ ಸಂದರ್ಭದಲ್ಲಿಯೂ ನಿನಗೆ ನೀನೇ 'ನಾನು ಯಾರು?' ಎಂದು ಕೇಳಿಕೋ. ಅದಲ್ಲದೆ, ಯಾರ ಗುಣಾವಗುಣಗಳನ್ನೂ ಅಳೆಯಲು ಹೋಗಬೇಡ."